
# ಮುಚ್ಚಳದಿಂದ ಟೇಬಲ್ ಸೆಟ್



ಸಾಂಪ್ರದಾಯಿಕ ಮದುವೆಯಲ್ಲಿ ಅಲಂಕಾರಿಕ ವಸ್ತುಗಳನ್ನು ನೋಡುವುದೇ ಒಂದು ಸಂಭ್ರಮ. ಮದುವೆಯ ಹಿಂದಿನ ದಿನ ನಡೆಯುವ ವರಪೂಜೆ ಶಾಸ್ತ್ರದಲ್ಲಿ ಹುಡುಗನ ಕಡೆಯವರು ಹುಡುಗಿಗೆ, ಹುಡುಗಿಯ ಕಡೆಯವರು ಹುಡುಗನಿಗೆ ಚೆಂದದ ವಸ್ತುಗಳನ್ನು ಮಾಡಿ ಉಡುಗೊರೆ ನೀಡುವುದು ಸಂಪ್ರದಾಯ. ಈ ಚಿತ್ರದಲ್ಲಿರುವ ಗಾರ್ಡನ್ ಟೇಬಲ್ ಸೆಟ್ ನಮ್ಮ ಮನೆಯವರಾದ ಸುಧೀಂದ್ರ ಅವರು ನಮ್ಮ ಮಗನ ಮದುವೆಗಾಗಿ ತಾವೇ ತಯಾರು ಮಾಡಿದ್ದು.

ಆಯುರ್ವೇದದ ಮಾತ್ರೆಗಳಿದ್ದ ಬಿಳಿ ಡಬ್ಬಿಗಳನ್ನು ಬಳಸಿ ಮಾಡಿರುವ ಬಿಳಿ ಬಣ್ಣದ ಪುಟ್ಟ ಪುಟ್ಟ ಕುರ್ಚಿಗಳು, ಮೇಜು ನೋಡಲು ಬಹಳ ಮುದ್ದಾಗಿವೆ. ಗಾರ್ಡನ್ ತರಹ ಕಾಣಲು ಸುತ್ತಲೂ ಹಸಿರು ಹೊದ್ದಿಸಲಾಗಿದೆ.

**– ಭಾರತಿ ಬಿ.ಎಸ್., ಬೆಂಗಳೂರು**



# ಹಿತ್ತಾಳೆ ಮಂದಾಸನ

ಇದು 80 ವರ್ಷಗಳ ಹಿಂದಿನ ಮಂದಾಸನ. ಜೋಡಿ ನವಿಲಿನ ಚಿತ್ರ ಮನೋಹರವಾಗಿದೆ. ಎರಡು ಕೆ.ಜಿ ತೂಗುವ ಇದು ನಮ್ಮ ಅಕ್ಕ ಶೈಲಾ ನಾಗೇಶ್ ಅವರ ಮನೆಯಲ್ಲಿದೆ.

**– ಸುಮಾ ಕಳಸಾಪುರ, ಶಿವಮೊಗ್ಗ**

# ಚೆಲುವಿನ ಚಿತ್ತಾರ





ಮದುವೆಯ ಕರೆಯೋಲೆ ಅಥವಾ ಯಾವುದೇ ಶುಭಾಶಯ ಪತ್ರಗಳು ಇವರ ಕೈ ಸೇರಿದರೆ ಹರಳು ಮಣಿಗಳಿಂದ ಶೃಂಗಾರಗೊಂಡು ಆಕಾಶದ ನಕ್ಷತ್ರದಂತೆ ಮಿಂಚುವ ಹೂಗಳಾಗುತ್ತವೆ. ಇಲ್ಲವೆ ವಿಶೇಷದಲ್ಲಿ ದೇವರ ಎದುರಿಗೆ ಹಾಕುವ ರಂಗೋಲಿಗಳಾಗುತ್ತವೆ ಅಥವಾ ಮನೆಯ ಶೋಭೆ ಹೆಚ್ಚಿಸುವ ಅಲಂಕಾರಿಕ ಕರಕುಶಲ ವಸ್ತುಗಳಾಗುತ್ತವೆ. ಶಿವಮೊಗ್ಗದ ವಿನೋಬನಗರದಲ್ಲಿರುವ ಇಂದಿರಾ ಶಂಕರ್‌ಭಟ್‌ರವರು 70ನೇ ವಯಸ್ಸಿನಲ್ಲಿ ಕಸದಿಂದ ರಸವಾಗಿಸುವಲ್ಲಿ ಕ್ರೀಯಾಶೀಲರಾಗಿದ್ದಾರೆ. ಜೊತೆಗೆ ಹತ್ತಿಯಿಂದ ನಾನಾ ನಮೂನೆಯ ಸುಂದರ ಆಕರ್ಷಕ ಹಾರಗಳನ್ನು, ಉಣ್ಣೆಯಿಂದ ಮಾಲೆ, ಬೊಂಬೆಗಳನ್ನು ತಯಾರಿಸುತ್ತಾ ಸಮಯವನ್ನು ವ್ಯರ್ಥಗೊಳಿಸದೇ ಉಪಯುಕ್ತವಾಗಿ ಕಳೆಯುತ್ತಿದ್ದಾರೆ.

**–ಸುಲೋಚನಾ ವಾದಿರಾಜ್, ಶಿವಮೊಗ್ಗ**